
ಪ್ರಚಾರದ ರ್‍ಯಾಲಿಗಳನ್ನು ಟೀಕಿಸುತ್ತಿದ್ದರು! ಗೆದ್ದಮೇಲೆ ವಿಜಯೋತ್ಸವದ ರ್‍ಯಾಲಿಗೆ ಹಠ ಹಿಡಿದಿದ್ದರು!


ಬೆಟ್ಟಿಂಗ್‌ನಲ್ಲಿ ಸೋತು 5000 ಕಳಕೊಂಡರು!




**ಗುಂಡ:** ಈ ದೊಡ್ಡ ಮಾಲ್‌ನಲ್ಲಿ ನನ್ನ ಹೆಂಡತಿ ಎಲ್ಲಿಯೋ ಕಳೆದು ಹೋಗಿದ್ದಾಳೆ. ದಯವಿಟ್ಟು ನನ್ನೊಡನೆ ಒಂದೆರಡು ನಿಮಿಷ ಮಾತಾಡುತ್ತೀರಾ?
**ಆಕೆ:** ಯಾಕೆ?
**ಗುಂಡ:** ನಾನು ಬೇರೆ ಮಹಿಳೆಯೊಂದಿಗೆ ಮಾತನಾಡಿದೊಡನೆ ನನ್ನ ಹೆಂಡತಿ ಎಲ್ಲಿದ್ದರೂ ತಾನಾಗಿ ಓಡಿ ಬರುತ್ತಾಳೆ. ಅದಕ್ಕೆ.

***

**ಪತಿ:** ನಿನ್ನ ಮುದ್ದಿನ ಮಗ ನನ್ನ ಜೇಬಿನಿಂದ ಹಣ ಕದ್ದಿದ್ದಾನೆ.
**ಪತ್ನಿ:** ಅವನೇ ಕದ್ದಿದ್ದಾನೆ ಎಂದು ಹೇಗೆ ಹೇಳುತ್ತೀರಿ?
**ಪತಿ:** ನೀನು ಕದ್ದಿದ್ದರೆ ಜೇಬಲ್ಲಿ ಒಂದು ರೂಪಾಯಿಯೂ ಇರುತ್ತಿರಲಿಲ್ಲ. ಈಗ ನೋಡು ಜೇಬಲ್ಲಿ ಚಿಲ್ಲರೆ ಇದೆ. ಅಂದರೆ ಇದು ನಿನ್ನ ಮಗನ ಕೆಲಸನೇ.

***

**ಗಂಡ:** ಮದುವೆ ಆಗಿ ಹತ್ತು ವರ್ಷ ಆಯ್ತು. ಇನ್ನೂ ನಂದು–ನಂದು ಅನ್ನುವುದನ್ನು ಬಿಟ್ಟು ನಮ್ಮದು ಅನ್ನೋದನ್ನು ಕಲಿ.
**ಹೆಂಡತಿ:** ರೀ... ನಮ್ಮಿಬ್ಬರದ್ದು ನೈಟಿ ಸಿಗ್ತಿಲ್ಲ. ಸ್ವಲ್ಪ ಹುಡುಕಿ ಕೊಡ್ರಿ ಪ್ಲೀಸ್.

***

ಗಂಡ ಫ್ಯಾನ್‌ಗೆ ಹಗ್ಗ ಕಟ್ಟುತ್ತಿರುವುದನ್ನು ನೋಡಿದ ಹೆಂಡತಿ ಭಯಗೊಂಡು ಹೀಗೆ ಕೇಳಿದಳು.
**ಹೆಂಡತಿ:** ರೀ... ಏನು ಮಾಡುತ್ತಿದ್ದೀರಿ, ನೀವು?
**ಗಂಡ:** ನೀನು ಯಾವಾಗಲೂ ಹೊಸ ಹೊಸ ಸೀರೆ ಬೇಕು ಅಂತ ಕೇಳ್ತಾನೇ ಇರ್ತೀಯ. ಅದಕ್ಕೆ ನಾನು ಬೇಜಾರಾಗಿ ನೇಣು ಹಾಕಿಕೊಂಡು ಸಾಯ್ತೀನಿ.
**ಹೆಂಡತಿ:** ಅಯ್ಯೋ ನನ್ನ ಬಿಟ್ಟು ಹೋಗ್ತಿರಾ? ನೀವಿಲ್ಲದೆ ನಾನೇನು ಮಾಡ್ಲಿ. ಹೇಗೋ ಹೋಗೊದು ಹೋಗ್ತೀರಾ, ಒಂದು ಬಿಳಿ ಸೀರೆ ಕೊಡ್ಸಿ ಹೋಗಿ.

***

**ಹೆಂಡತಿ:** ನಾನು ಸತ್ತರೆ, ಏನು ಮಾಡ್ತೀರಾ?
**ಗಂಡ:** ನಾನೂ ಸತ್ತೋಗ್ತೀನಿ.
**ಹೆಂಡತಿ:** ಯಾಕ್ರಿ?
**ಗಂಡ:** ಯಾವನಿಗೆ ಗೊತ್ತು. ಖುಷಿಗೆ ಹಾರ್ಟ್ ಅಟ್ಯಾಕ್ ಆದ್ರೂ ಆಗಬಹುದು.

ಡೇಟಿಂಗ್‌ಗೆಂದು ದೂರದೂರಿಗೆ ಹೋಗಿದ್ದ ಯುವಕ, ಯುವತಿಯ ಬಳಿ ಸಿಹಿಮುತ್ತಿನ ಅಪೇಕ್ಷೆ ವ್ಯಕ್ತಪಡಿಸಿದ.
**ಯುವತಿ:** ಸಿಹಿಮುತ್ತು ಬೇಕಿದ್ರೆ 'ಐಫೋನ್ 14 ಪ್ರೊ' ಗಿಫ್ಟ್ ಕಡ್ಡಾಯ.
**ಯುವಕ:** ಅಷ್ಟೊಂದು ಹಣ ನನ್ನತ್ರ ಇಲ್ಲ.
**ಯುವತಿ:** ಇಲ್ಲವಾದರೆ ನಡಿ ಹೋಗೋಣ.
**ಯುವಕ:** ವಾಪಸ್ ಹೋಗಲು ಸಿಹಿಮುತ್ತೂ ಕಡ್ಡಾಯ.


ಕರೆಂಟ್ ಉಚಿತ ಅಂತ ವಯರ್ ಮುಟ್ಟೋಕೆ ಹೋಗ್ಬೇಡ!

**ಅಪ್ಪ:** ಅಮ್ಮ ಎಲ್ಲೋ?
**ಮಗ:** ಮಾಮನ ಮದುವೆ ಇದ್ಯಲ್ವಾ, ಅದಕ್ಕೆ ಸೃಷ್ಟಿಕರ್ತನ ವಿನ್ಯಾಸವನ್ನು ತಿದ್ದುಪಡಿ ಮಾಡಿಸಲು ಹೋಗಿದ್ದಾಳೆ.
**ಅಪ್ಪ:** ಏನೋ ಹಾಗಂದ್ರೆ?
**ಮಗ:** ಅಯ್ಯೋ, ಬ್ಯೂಟಿ ಪಾರ್ಲರ್‌ಗೆ ಹೋಗಿದ್ದಾಳೆ.

***

**ಮೇಷ್ಟ್ರು:** ಗುಂಡ, ಬಡವನಿಗೂ ಶ್ರೀಮಂತನಿಗೂ ಇರುವ ವ್ಯತ್ಯಾಸವೇನು?
**ಗುಂಡ:** ಬಡವ ಎಮ್ಮೆ ಮೇಯಿಸ್ತಾನೆ, ಶ್ರೀಮಂತ ನಾಯಿ ಮೇಯಿಸ್ತಾನೆ ಸಾರ್.

***

**ಗುಂಡ:** ಯಾಕೋ ಶಾಲೆಯಿಂದ ಬೇಗ ಬಂದೆ.
**ತಿಮ್ಮ:** ಒಂದು ಸೊಳ್ಳೆ ಸಾಯಿಸಿದ್ದಕ್ಕೆ ಮೇಷ್ಟ್ರು ಮನೆಗೆ ಕಳ್ಸಿದ್ರು.
**ಗುಂಡ:** ಹೌದಾ? ಅದ್ಯಾಕೆ?
**ತಿಮ್ಮ:** ಆ ಸೊಳ್ಳೆ ಮೇಷ್ಟ್ರ ಕೆನ್ನೆ ಮೇಲಿತ್ತು.

***

**ಹೆಂಡತಿ:** ರೀ... ನನ್ನನ್ನು ಮದುವೆ ಆದಮೇಲೆ, ನಿಮಗಿಂತ ತುಂಬಾ ಅದೃಷ್ಟವಂತ ಬೇರೆ ಯಾರಾದ್ರೂ ಇದ್ದಾರಾ?
**ಗಂಡ:** ಹು ಇದಾನೆ. ನನಗಿಂತ ಮುಂಚೆ ನಿನ್ನನ್ನು ನೋಡಿ ರಿಜೆಕ್ಟ್ ಮಾಡಿದವನು.

***

**ಸಂದರ್ಶಕ:** ನಿಮಗೆ ಎಕ್ಸೆಲ್ ಬರುತ್ತಾ?
**ಗುಂಡ:** ಬರುತ್ತೆ ಸರ್, ಆದರೆ ಸ್ವಲ್ಪ ಟ್ವೈಟ್. ನನ್ನದು ಡಬಲ್ ಎಕ್ಸೆಲ್.

***

**ಅತ್ತೆ:** ನಿನ್ನ ಗಂಡ ನನ್ನ ಹೊಟ್ಟೆಯಲ್ಲಿದ್ದಾಗ ನಾನು ಏನೇನು ತಿಂಡಿ ತಿಂದಿದ್ನೋ ಅವೆಲ್ಲ ಅವನಿಗೆ ಈಗಲೂ ಇಷ್ಟ.
**ಸೊಸೆ:** ಹೌದು ಅತ್ತೆ. ಆದರೆ ನೀವು ಬಸುರಿ ಆಗಿದ್ದಾಗ ಎಣ್ಣೆ, ಸಿಗರೇಟಿನಿಂದ ದೂರ ಇರಬೇಕಿತ್ತು.

ಸಂಗ್ರಹ: ಶರದ ಕುಲಕರ್ಣಿ, ಬೀದರ್